ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2556/2022

ಚಾಸಾಃ1 ಪ್ರಾಸಾಃ1

ದಿನಾಂಕಃ 21.04.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸದಾನಂದ |
| ತಂದೆಯ ಹೆಸರು | : | ಭದ್ರ ಪೂಜಾರಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಾಸ ಸ್ಥಳ | : | ಗಿಳಿಯಾರು, ಬ್ರಹ್ಮಾವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನನಗೆ ಆರೋಪಿಯ ಪರಿಚಯ ಇಲ್ಲ. ನಾನು ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಸುಮಾರು 2 ವರ್ಷಗಳ ಹಿಂದೆ ಮಧ್ಯಾಹ್ನದ ಸಮಯದಲ್ಲಿ ಬೇಳೂರಿನ ಅಂಗಡಿಯ ಬಳಿ ಇದ್ದಾಗ ಪೊಲೀಸರು ಕರೆಸಿರುತ್ತಾರೆ. ಸ್ಥಳದಲ್ಲಿ ಕೆಲವು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ಬೇಳೂರಿನ ಮುಳ್ಳುಗುಡ್ಡೆಯ ಹತ್ತಿರ ಪೊಲೀಸರು ಭೇಟಿ ನೀಡಿದಾಗ ಪೋಟೋ ತೆಗೆದಿರುತ್ತಾರೆ. ಠಾಣೆಗೆ ಭೇಟಿ ನೀಡಿದಾಗ ದ್ವಿಚಕ್ರ ವಾಹನವನ್ನು ನೋಡಿರುತ್ತೇನೆ. ಆಗ ಅಲ್ಲಿ ಒಂದು ಪೋಟೋ ತೆಗೆದಿರುತ್ತಾರೆ.

ಸಾಕ್ಷಿಗೆ ದೂರು, ಸ್ಥಳ ಪಂಚನಾಮೆ, ನಕ್ಷೆ, ಸ್ವತ್ತು ಸ್ವಾಧೀನ ಪಂಚನಾಮೆ, ಘಟನಾ ಸ್ಥಳದ ಒಂದು ಪೋಟೋ, ದ್ವಿಚಕ್ರ ವಾಹನದ ಒಂದು ಪೋಟೋಗಳನ್ನು ತೋರಿಸಿದ್ದು, ಅವುಗಳನ್ನು ನಿಪಿ.1 ರಿಂದ 6 ಎಂದು, ಸಾಕ್ಷಿ ಸಹಿಗಳನ್ನು ನಿಪಿ.1(ಎ) ರಿಂದ ನಿಪಿ.4(ಎ) ಎಂದು ಗುರುತಿಸಲಾಯಿತು.

ನಾನು ಪೊಲೀಸರಿಗೆ ಬೇರೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ27.08.22 ರಂದು ಮಧ್ಯಾಹ್ನ 1 ಗಂಟೆ ಸಮಯಕ್ಕೆ ಬೇಳೂರು ಗ್ರಾಮದ ಮುಳ್ಳುಗುಡ್ಡೆಯಿಂದ ಸ್ವಲ್ಪ ಮುಂದೆ ಗಣಪತಿ ದೇವಸ್ಥಾನದ ಹತ್ತಿರ ನನ್ನ ಎದುರಿನಲ್ಲಿ ಪಲ್ಸರ್ ವಾಹನ ನಂ.ಕೆಎ-20/ಇವಿ-5282 ದ್ವಿಚಕ್ರ ವಾಹನವನ್ನು ಆರೋಪಿ ಹೆಂಡತಿ ಶಾಂಭವಿ ಹಾಗೂ ಮಗು ಶ್ರೇಣಿಕಾ ಎಂಬುವವರೊಂದಿಗೆ ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸು ಬರುತ್ತಿದ್ದು, ರಸ್ತೆಯಲ್ಲಿದ್ದ ಹಾವು ನ್ನು ನೋಡಿ ಬ್ರೇಕ್ ಹಾಕಿದ ಪರಿಣಾಮ ಮೋಟಾರು ಸೈಕಲ್ ಸವಾರರೆಲ್ಲರೂ ರಸ್ತೆಗೆ ಬಿದಿದ್ದು, ಹಿಂಬದಿ ಸವಾರರಾದ ಶಾಂಭವಿಗೆ ತಲೆಗೆ, ಭುಜಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಅವರನ್ನು ಆರೋಪಿ ಮತ್ತು ಮಗುವಿನೊಂದಿಗೆ ಎನ್. ಆರ್ ಆರ್ಚಾಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ನಿಪಿ.1 ರಂತೆ ನಾನು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪೊಲೀಸರು ಘಟನಾ ಸ್ಥಳಕ್ಕೆ ದಿಃ30.08.22 ರಂದು ಭೇಟಿ ನೀಡಿದಾಗ ನಾನು ಸ್ಥಳವನ್ನು ತೋರಿಸಿದ್ದು, ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10-30ರವರೆಗೆ ಪಂಚನಾಮೆ ಮತ್ತು ನಕ್ಷೆ ತಯಾರಿಸಿ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿ ಮೇಲೆ ಹೇಳಿದ ವಾಹನವನ್ನು ಠಾಣೆಗೆ ತಂದು ಹಾಜರುಪಡಿಸಿದ್ದು, ಅದನ್ನು 11.15 ರಿಂದ 11.45ರವರೆಗೆ ವಶಕ್ಕೆ ಪಡೆದು ಪೋಟೋ ತೆಗೆದು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಶಾಂಭವಿರವರನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಮಣಿಪಾಲದ ಕೆ ಎಮ್ ಸಿ ಆಸ್ಪತ್ರೆಗೆ ದಾಖಲಿಸಿದ್ದು,ಆಕೆ ಚಿಕಿತ್ಸೆ ಫಲಕಾರಿಯಾಗದೆ ದಿಃ02.09.2022 ರ ರಾತ್ರಿ 9.50 ಕ್ಕೆ ಮೃತಪಟ್ಟಿದ್ದು, ಈ ವಿಚಾರವಾಗಿ ನಾನು ದಿಃ03.09.22 ರಂದು ಪೊಲೀಸರು ಮರಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

ನಾನು ಅಪಘಾತದ ಪ್ರತ್ಯಕ್ಷದರ್ಶಿಯಾಗಿದ್ದು, ದೂರು ನೀಡಿ, ಆರೋಪಿಯ ಅತೀವೇಗ ಹಾಗೂರ ನಿರ್ಲಕ್ಷತನದ ಚಾಲನೆಯಿಂದಲೇ ಅಪಘಾತವಾಗಿದೆ ಎಂದು ತಿಳಿದಿದ್ದರೂ ಸಹ ಆರೋಪಿ ನನ್ನ ಪರಿಚಯಸ್ಥನಾದ ಕಾರಣ  ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**